◆ **ದೇಶದ ಅತ್ಯುತ್ತಮ ನೃತ್ಯ ಕಲಾವಿದೆಯಾಗಿ, ನೃತ್ಯಗುರುವಾಗಿ ಗುರುತಿಸಿಕೊಳ್ಳುವುದನ್ನು ಕೇಳಿದ್ದುಂಟು. ಆದರೆ ನೀವು ದೇವಾಲಯ ನೃತ್ಯವನ್ನು ಪ್ರಸ್ತುತಪಡಿಸುವ ಕಲಾವಿದೆಯೆಂದೇ ವಿಶೇಷವಾಗಿ ಗುರುತಿಸಿಕೊಂಡಿದ್ದೀರಿ. ಅಂದಹಾಗೆ, ಬಾಲ್ಯದಲ್ಲಿ ನಿಮ್ಮ ನೃತ್ಯಶಿಕ್ಷಣ ಹೇಗಾಯಿತು ?**

ನನ್ನ ಅಮ್ಮ ಸ್ನೇಹಪ್ರಭಾ ದಾತಾರ್ ಓರ್ವ ಉತ್ತಮ ನೃತ್ಯಪಟುವಾಗಿದ್ದರು. ನನ್ನೊಳಗೆ ಅಡಗಿದ್ದ ನೃತ್ಯಪ್ರೀತಿಯನ್ನು ಗುರುತಿಸಿದವರೂ ಅವರೇ. ನಾವು ಅರಸೀಕೆರೆಯಲ್ಲಿದ್ದಾಗ ಅಲ್ಲಿ ಉತ್ತಮ ನೃತ್ಯ ಗುರುಗಳು ಇರಲಿಲ್ಲ. ನನ್ನ ಅಮ್ಮ ಕೇರಳದಲ್ಲಿ ಹುಟ್ಟಿ ಬೆಳೆದವರಾದ್ದರಿಂದ ಅಜ್ಜಿ ಮನೆಗೆ ನಾನು ಆಗಾಗ ಹೋಗುತ್ತಿದ್ದೆ. ಅಲ್ಲಿಂದಲೇ ಕಣ್ಣನ್ ಮರಾರ್ ಎಂಬ ಗುರುಗಳನ್ನು ಮನೆಗೆ ಕರೆ ತಂದು ನನಗೆ ನೃತ್ಯ ಶಿಕ್ಷಣ ಕೊಡಿಸಿದರು. ನಾನು ಒಂಟಿಯಾಗಿಬಿಡುತ್ತೇನೆಂದು, ಅವರು ಅಕ್ಕ ಪಕ್ಕದ ಮನೆಗಳಿಗೆ ತೆರಳಿ, ಅವರ ಮಕ್ಕಳನ್ನೂ ನೃತ್ಯ ಪಾಠಕ್ಕೆ ಕಳಿಸುವಂತೆ ಮನವಿ ಮಾಡಿಕೊಳ್ಳುತ್ತಿದ್ದರು. ಆದರೆ ಆಗೆಲ್ಲ ನೃತ್ಯ ಕಲಿಕೆ ಹೆಣ್ಣುಮಕ್ಕಳಿಗೆ ಭೂಷಣವೆಂಬ ಅಭಿಪ್ರಾಯ ಇರಲಿಲ್ಲ. ಹೀಗೆ ನೃತ್ಯಕಲಿಕೆ ಶುರುವಾದರೂ ಅದು ಹೆಚ್ಚೇನೂ ಮುಂದುವರೆಯಲಿಲ್ಲ. ಒಮ್ಮೆ ಅಮ್ಮ ತಮ್ಮನಿಗೊಂದು ದಿರಿಸು ಖರೀದಿಸಿ ತಂದರು. ದಿರಿಸನ್ನು ಕಟ್ಟಿದ ಮಲಯಾಳ ವೃತ್ತಪತ್ರಿಕೆಯಲ್ಲಿ ಕೇರಳದ 'ಕಲಾಮಂಡಲಂ' ಶಾಲೆಯ ಕುರಿತು ಉಲ್ಲೇಖವಿತ್ತು. ಅಲ್ಲಿಗೆ ಅರ್ಜಿ ಸಲ್ಲಿಸಿದಾಗ, ನನ್ನನ್ನು ಆಯ್ಕೆ ಮಾಡಿದರು. ಆದರೇನು ಮಾಡೋಣ, ಇನ್ನೇನು ಅಲ್ಲಿ ಪ್ರವೇಶ ಪಡೆಯಬೇಕು ಅನ್ನುವಷ್ಟರಲ್ಲಿ, ಮೈಸೂರು ರಾಜ್ಯದವರನ್ನು ಅವರು ಸೇರಿಸಿಕೊಳ್ಳುವುದಿಲ್ಲ ಎಂಬ ಆಕ್ಷೇಪ ಬಂತು. ವಳ್ಳತೋಳ್ ನಾರಾಯಣ ಮೆನನ್ ಅವರ ಮಗಳು ವಸಂತಿ ಅವರನ್ನು ಭೇಟಿಯಾದ ಅಮ್ಮ, ಹೇಗಾದರೂ ಮಗಳನ್ನು ಸೇರಿಸಿಕೊಳ್ಳಬೇಕು ಎಂದು ಮನವಿ ಮಾಡಿಕೊಂಡರು. ವಸಂತಿ ಮತ್ತು ನನ್ನಮ್ಮ ಕೇರಳದಲ್ಲಿ ಬಾಲ್ಯದ ಸ್ನೇಹಿತೆಯರಾಗಿದ್ದರು. ಆ ಸ್ನೇಹ ಕೆಲಸ ಮಾಡಿತು.

'ಕಲಾಮಂಡಲಂ' ಸೇರಿದಾಗ ನನಗೆ ಕೇವಲ ಒಂಬತ್ತು ವರ್ಷ ವಯಸ್ಸು. ಮುಂದಿನ ಐದು ವರ್ಷಗಳ ಕಾಲ ಕಠಿಣ ಪರಿಶ್ರಮವೊಂದೇ ನನ್ನ ಹಾದಿಯಾಗಿತ್ತು. ಅಲ್ಲಿ ಭರತನಾಟ್ಯಂ, ಕಥಕಳಿ, ಮೋಹಿನಿಯಾಟ್ಟಂ ನೃತ್ಯವನ್ನು ಕಲಿತೆ. ಅಲ್ಲಿ ಪದವಿ ಪಡೆದ ಬಳಿಕ 'ಕಲಾಮಂಡಲಂ' ತಂಡದಲ್ಲಿ ಸೇರಿಕೊಂಡು ಸಾಕಷ್ಟು ಪ್ರವಾಸ ಮಾಡಿ ಕಾರ್ಯಕ್ರಮಗಳನ್ನು ಕೊಟ್ಟೆ. 1962–63ನೇ ಸಾಲಿನಲ್ಲಿ ಇಂಡೋ ಚೀನಾ ಯುದ್ಧದ ಸಂದರ್ಭದಲ್ಲಿ ಮಿಲಿಟರಿ ಪಡೆಗಳ ಮನರಂಜನೆಗೆಂದು 'ಕಲಾಮಂಡಲಂ' ತಂಡವನ್ನು ಆಹ್ವಾನಿಸಿ, ನೃತ್ಯ ಪ್ರದರ್ಶನ ಮಾಡುವಂತೆ ಹೇಳಿದ್ದರು. ನಾವು ಬರೋಬ್ಬರಿ ಆರು ತಿಂಗಳ ಕಾಲ ಗಡಿ ಪ್ರದೇಶದಲ್ಲಿ ಹೊರಗಿನ ಸಂಪರ್ಕವಿಲ್ಲದೆ ಟೆಂಟ್‌ನಲ್ಲಿ ಜೀವನ ಮಾಡಿದೆವು. ಆಗಿನ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಅವರೇ ಶುಭಹಾರೈಸಿ ಕಳುಹಿಸಿದ್ದರು. ಟ್ರಕ್‌ನಲ್ಲಿ ಮಿಲಿಟರಿ ಡ್ರೆಸ್ ಹಾಕ್ಕೊಂಡು ಹೋಗ್ತಾ ಇರುವಾಗ ಟ್ರಕ್ ಸಾಗುತ್ತಿದ್ದಾಗ ಜೋರು ಮಳೆ ಬಂದು, ಕಲ್ಲುಗಳು ಉರುಳಿಬಿದ್ದ ಸನ್ನಿವೇಶ ನೆನಪಿದೆ. ಅಬ್ಬಾ... ಕಾಡಲ್ಲಿ ಎರಡು ದಿನ ಯಾವುದೇ ಸಂಪರ್ಕ ಇಲ್ಲದೆ, ಕಾಡುಪ್ರಾಣಿಗಳ ಸದ್ದು ಕೇಳುತ್ತ ಕಳೆಯಬೇಕಾಯಿತು. ನಮ್ಮನ್ನು ಮಿಲಿಟರಿಯವರು ಪಾರು ಮಾಡಿದರು. ಮತ್ತೆ ದೆಹಲಿಯಲ್ಲಿ ಆಸ್ಪತ್ರೆವಾಸವೂ ಆಯಿತು. ಅಲ್ಲಿಂದ ಮರಳಿ ಬಂದ ನಾನು ಅಪ್ಪ ಅಮ್ಮನಿಗೆ ಕಥೆ ಹೇಳಿದ್ದೇ ಹೇಳಿದ್ದು. ಆಗ ಸರ್ಕಾರದಿಂದ ಕೊಟ್ಟ ಬಹುಮಾನದ ಮೊತ್ತವನ್ನು ಸ್ವೀಕರಿಸಬೇಡ ಎಂದು ಅಮ್ಮ ಹೇಳಿದ್ದರು. 'ದೇಶ ಸೇವೆ ಮಾಡೋಕೆ ಅವಕಾಶ ದೊರೆತಿದ್ದೇ ದೊಡ್ಡದಲ್ವಾ' ಎನ್ನುವುದು ಅಮ್ಮನ ಅಭಿಪ್ರಾಯವಾಗಿತ್ತು.

ಒಮ್ಮೆ ವೈಜಯಂತಿ ಮಾಲಾ ಅವರು ಕಲಾಮಂಡಲಂಗೆ ಪತ್ರ ಬರೆದು ತನಗೆ ಮೋಹಿನಿಯಾಟ್ಟಂ ಕಲಿಯಬೇಕಾಗಿದೆ ಎಂದು ಕೋರಿಕೆ ಸಲ್ಲಿಸಿದಾಗ, ನೃತ್ಯಗುರು ಚಿನ್ನಮ್ಮು ಅಮ್ಮ ಅವರೊಡನೆ ಸಹಾಯಕಿಯಾಗಿ ನಾನೇ ಹೋಗಿದ್ದೆ. ಮೂರು ತಿಂಗಳ ಕಾಲ ವೈಜಯಂತಿ ಮಾಲಾ ಅವರ ಮನೆಯಲ್ಲಿ ಇದ್ದು ಅವರಿಗೆ ನೃತ್ಯ ಕಲಿಸಿದೆವು.

ಅನಂತರ ನಮ್ಮ ಕುಟುಂಬ ಬೆಂಗಳೂರಿಗೆ ಸ್ಥಳಾಂತರಗೊಂಡಿತು. ಇದರೊಂದಿಗೆ ಮೋಹಿನಿಯಾಟ್ಟಂ ಎಂಬ ನೃತ್ಯವನ್ನೂ ನಾನು ಬೆಂಗಳೂರಿಗೆ ತಂದೆ ಎನ್ನಬಹುದು. ರಾಜಾಜಿ ನಗರದ